ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 23ನೇ ಸೆಪ್ಟಂಬರ್ 1896.

ಬೆಂಗಳೂರು ಸಿಟಿ ಕೋಟೆ ಸರಹದ್ದು ಹೊಸ ತರುಗಿನಪ್ಯಾಟೇಲಿ ಸರ್ವೆ ಇಲಾಖೇ ಕ್ಲಾಸರ್ ನಾರಾಯಣಜಯರಾವ್ ಯಂಬುವರ ಮನೆ ಬಾಗಲಿಗೆ ಹಾಕಿದ್ದ ಬೀಗವನ್ನು ತಾರೀಖು 6—9—96ರಲ್ಲು ಯಾರೋ ತೆಗದುಬಿಟ್ಟು ಒಳಗೆ ಪೆಟ್ಟಿಗೆಗಳಿಂದ ಕಳವು ಮಾಡಿ ಕೊಂಡು ಹೋದ ತಪ್ಪೀಲ್ ಪಟ್ಟಿ:—

				ಕ್ರಯ ರೂ.	ಆ.	ಪೈ.
1	ಕಲಾಬತು ಮೂರು ಬೊಟ್ಟು ಅಗಲ ಅಂಜು ಮತ್ತು ಒಂದು ಮಳ ಕಬ್ಬಗುಪ್ಪೆಳ್ಳ ಕೆಂಪು ಪೀತಾಂಬ್ರ			100	0	0
2	ಲಕ್ಷ್ಮೀಶ್ವರದ ಕೆಂಪು ಅಂಚಿನ ರೇಷ್ಮೆ ಚಾರಬಾನೆ ಸೀರಿ ಒಂದು	..	..	22	0	0
3	ಪೂನಾದ್ದು ಬೆಳ್ಳಿಬಟ್ಲು ಇದರ ತೂಕ ರೂ. 16—2	..	..	19	0	0
4	ಡಿಟೋ ಬೆಳ್ಳಿವೆಡ್ಡರಣಿ ತೂಕ ರೂ. 6—11—0	..	..	8	4	0
5	ಎರಡು ಬೆಳ್ಳಿಬಟ್ಲು ತೂಕ ರೂ. 11—10—0	..	..	14	0	0
6	ಬೆಳ್ಳೀದು ಬಟ್ಲು ಸಾದಾ ತೂಕ ರೂಪಾಯಿ 4—0—0	..	..	4	0	0
7	ಬೆಳ್ಳಿ ಕಾಲುಂಗರ 14—0—0 ರೂ. ತೂಕ	..	..	14	0	0
8	ಬೆಳ್ಳಿ ಡಾಬು 1ಕ್ಕೆ 16—0—0 ರೂ. ತೂಕ	..	..	16	0	0
9	ಅಪರಂಜಿ ಎಂಟು ಮೂಲೆ ವುಂಗ್ರ ತೂಕ ರೂ. 1—0—0	..	..	28	0	0
10	ನವರ್ತ ಬಾಬತು ಶೀಲ್ ಸಾದಾ ವುಂಗ್ರ ರೂ. 0—12—0 ತೂಕ	..	..	18	0	0
11	ಶಾಲ್ಯದ ರೇಷ್ಮಿ ಅಂಚಿನ ಜೊಸ ಪಂಚಿ ..	..	..	4	0	0
12	ಕಲಾಬತು ಕೆಂಪು ಶಾಲು ..	..	..	15	0	0
13	2 ಭಂಗಾರದ ಜೋಮಾಲೆ ಗುಂಡು ರೂ. 0—1—0 ತೂಕ	..	...	1	4	0
14	ಚಿನ್ನದ ಸಾದಾ ಗುಂಡುಗಳು ಸುಮಾರು 12 ಅಥವಾ 16	..	..	8	0	0
15	ಕಪ್ಪು ರೇಷ್ಮೀಲಿ ಕಟ್ಟಿದ ಹುಡುಗರಿಗೆ ಕಟ್ಟುವ ಗೆಜ್ಜೆಗಳು	..	..	8	0	0
16	ಬೆಳ್ಳಿ ನಕ್ಶದ ಡಬ್ಬಿ ರೂ. 2—0—0 ತೂಕ	..	...	4	0	0
17	ಬೆಳ್ಳಿ ಬೀವಿಸಿ ಮಂಗಳ ಗೌರಿ ಶೇರಿ ರೂ. 8—0—0 ತೂಕ	...	...	8	0	0
18	3 ಕುಬಸಗಳು	..	..	3	0	0
			ಜುಮ್ಲಾ ..	294	8	0

ಬಿ. ಕುಪ್ಪುಸಾಮಿನಾಯಡು,
ಫಾರ್ ಅಸಿಸ್ಟೆಂಟ್ ಸೂ|| ಆಫ್ ಪೋಲೀಸ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇಸ್ತಿಹಾರ್ನಾಮೆ.

ಬೆಂಗಳೂರು ಟೌನ್ ಮ್ಯುನಿಸಿಪಲ್ ರೆಗ್ಯುಲೇಷ್ಗಳ ಇದರಡಿ ಬರುವ ಸೆಕ್ಷನ್ಗಳು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಪ್ರಸಿಡೆಂಟರಿಗೆ ಹೊಸಕಟ್ಟಣಗಳನ್ನು ಕುರಿತು ನೋಟಿಸ್ ಕೊಡಲ್ಪಡತಕ್ಕದ್ದು.

148. ಯಾವದಾದರೂ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಯಾವ ಕಟ್ಟಣವನ್ನಾದರೂ ಕಟ್ಟಿಸಲಿಕ್ಕೆ ಅಥವಾ ಖೋಲ್ಬಂದಿ ಮಾಡಿಸಲಿಕ್ಕೆ ಪುರೂ ಮಾಡುವದಕ್ಕೆ ಮುಂಚಿತವಾಗಿ ಆಂಥಾ ಕಟ್ಟಣವನ್ನು ಕಟ್ಟಿಸಲಿಕ್ಕೆ ಯಾ ಖೋಲ್ಬಂದಿ ಮಾಡಲಿಕ್ಕೆ ಖಾಯಿಷ್ ಮಾಡುವ ಮನುಷ್ಯನು ಆ ವಿಷಯವನ್ನು ಕುರಿತು ಬರವಣಿಗೆ ಮೂಲಕ ಪ್ರಸಿಡೆಂಟರಿಗೆ ನೋಟಿಸ್ ಕೊಡತಕ್ಕದ್ದಲ್ಲದೆ ಪ್ರಸಿಡೆಂಟರ ಹುಕುಂ ಅನುಸರಿಸಿ ನಿಷ್ಕರ್ಷೆ ಮಾಡೋಣಾದ ಬಂದು ಮಟ್ಟದ ವಿಷಯದಲ್ಲಿ ಆಂಥಾ ಕಟ್ಟಣದ ತಳಾದಿಯು ಯೆಲ್ಲಕ್ಕೂ ಕೀಳ್ಪಟ್ಟ ತಳವರೆಯೂ ಯಾವ ಮಟ್ಟದ ಪ್ರಕಾರ ಹಾಕಲ್ಪಡುತ್ತೋ ಆ ಮಟ್ಟವನ್ನು ಕಾಣಿಸಿ ಒಂದು ಪ್ಲಾನ್ ಯಾನೆ ನಕ್ಷೆಯನ್ನು ಸದರೀ ನೋಟಿಸ್ ಸಂಗಡ ಕಳುಹಿಸಿಕೊಡತಕ್ಕದ್ದು: ಯಾವನು ಆಂಥಾ ನೋಟಿಸ್ ಕೊಡದೆ ತಪ್ಪು ತಾ ನೋ ಅವನು ಐವತ್ತು ರೂ ಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ರಿಪೇರಿಗಳು ನಡಿಯುತ್ತಾ ಇರುವ್ಗ ಅಷ್ಟೆ (ಮರ ವಗ್ಗೈರೆ) ಕಟ್ಟಿಸತಕ್ಕದ್ದು.

175. ಯಾವದಾದರೂ ಬೀದಿಗೆ ಯಾ ಕಾಲುದಾರಿಗೆ ಅಡ್ಡವಾಗಿರುವ ಅಥವಾ ಆಂಥಾ ಕಾಮುಗಾರಿಯಿಂದ ಅಸೌಂದರ್ಯ ವುಂಟಾಗಿರುವ ಸ್ಥಳದಲ್ಲಿ ಯಾವದಾದರೂ ಕಟ್ಟಣವನ್ನು ಕಟ್ಟಿಸಲಿಕ್ಕೆ ಅಥವಾ ಕೆಡವಿಸಲಿಕ್ಕೆ ಯಾವದಾದರೂ ಕಟ್ಟಣ ಹೊರಗಿನ ಭಾಗವನ್ನು ಒದಲಾಯಿಸಲಿಕ್ಕೆ ಯಾ ರಿಪೇರಿ ಮಾಡಿಸಲಿಕ್ಕೆ ಅಪೇಕ್ಷಿಸುವ ಪ್ರತಿ